	ಮೀನುಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ	
47	ಹಿರಿಯ ಭೂವಿಜ್ಞಾನಿ (ಅಂತರ್ಜಲ) ಚಿಕ್ಕಬಳ್ಳಾಪುರ	ಟಾಟಾ ಸುಮೋ
48	ಸಹಾಯಕ ನಿರ್ದೇಶಕರು, ನಗರ ಯೋಜನೆ ಚಿಕ್ಕಬಳ್ಳಾಪುರ	ಟಾಟಾ ಸುಮೋ
49	ಜಿಲ್ಲಾ ಸಿವಿಲ್ ನ್ಯಾಯಾಧೀಶರು, ಚಿಕ್ಕಬಳ್ಳಾಪುರ	ಟಾಟಾ ಇಂಡಿಗೋ
50	ಜಿಲ್ಲಾ ಅಧಿಕಾರಿ, ಅಬಕಾರಿ ಇಲಾಖೆ, ಚಿಕ್ಕಬಳ್ಳಾಪುರ	ಟಾಟಾ ಇಂಡಿಗೋ
51	ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ	ಟಾಟಾ ಇಂಡಿಗೋ

ಡಾ॥ ಪರಮಶಿವಯ್ಯನವರ ವರದಿಯ ಅನುಷ್ಠಾನ

5(15) ಶ್ರೀ ಬಚ್ಚೇಗೌಡ ಕೆ ಪಿ:(ಚಿಕ್ಕಬಳ್ಳಾಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ಪರಮಶಿವಯ್ಯನವರ (ಶಾಶ್ವತ ನೀರಾವರಿ ಯೋಜನೆ) ವರದಿಯನ್ವಯ ಇಸ್ರೋನ ಅಂಗಸಂಸ್ಥೆಯಾದ ಎನ್.ಆರ್.ಎಸ್.ಎ.ಗೆ ಸ್ಯಾಟಲೈಟ್ ಮೂಲಕ ಸರ್ವೆ ನಡೆಸಲು ಸರ್ಕಾರ ಸೂಚನೆ ನೀಡಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಅನುಮತಿಯನ್ನು ನೀಡಲಾಯಿತು;

ಇ) ಈ ಸರ್ವೆ ಕಾರ್ಯಕ್ಕಾಗಿ ಸರ್ಕಾರ ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಹಣ ಎಷ್ಟು ಮತ್ತು ಉಳಿಕೆ ಹಣ ಎಷ್ಟು; (ವಿವರಗಳನ್ನು ನೀಡುವುದು);

ಈ) ಎನ್.ಆರ್.ಎಸ್.ಎ.ಸಂಸ್ಥೆಯು ಸರ್ವೆ ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ;

ಉ) ನೀಡಿದ್ದಲ್ಲಿ, ಈ ವರದಿಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ನೀಡಿದ್ದಲ್ಲಿ, ಈ ವರದಿಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಋ) ಹಾಗಿದ್ದಲ್ಲಿ, ಎಷ್ಟು ಸದಸ್ಯರನ್ನೊಳಗೊಂಡ ಸಮಿತಿಯನ್ನು ಎಂದು ರಚಿಸಲಾಗುವುದು; (ವಿವರಗಳನ್ನು ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು):

ಅ) ನೀಡಿದೆ.

ಆ) ದಿನಾಂಕ 12.09.2003 ರಂದು ಕರಾರನ್ನು ಮಾಡಿಕೊಳ್ಳಲಾಗಿದೆ.

ಇ) ಸದರಿ ಸರ್ವೆ ಕಾರ್ಯಕ್ಕೆ ಈವರೆವಿಗೂ ಸಂಸ್ಥೆಗೆ ರೂ. 643.79 ಲಕ್ಷಗಳನ್ನು ಪಾವತಿಸಲಾಗಿದೆ ಹಾಗೂ ಒಡಂಬಡಿಕೆಯ ಪ್ರಕಾರ ಇನ್ನೂ ರೂ. 781.21 ಲಕ್ಷಗಳನ್ನು ಪಾವತಿಸಬೇಕಾಗಿರುತ್ತದೆ.

ಈ) ಇಲ್ಲ.

ಉ) ಸಂಸ್ಥೆಯು ವರದಿ ಸಲ್ಲಿಸಿದ ನಂತರ, ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕೆ.ಐ.ಎ.ಡಿ.ಬಿ.ಯಿಂದ ಭೂಸ್ವಾಧೀನ ಪ್ರಕ್ರಿಯೆ

6(16) ಶ್ರೀ ಬಚ್ಚೇಗೌಡ ಕೆ ಪಿ:(ಚಿಕ್ಕಬಳ್ಳಾಪುರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿಯ ಬಾಗಲೂರು, ಹೂವಿನಾಯಕನಹಳ್ಳಿ, ಮಹದೇವಕೊಡಿಗೇಹಳ್ಳಿ ಮತ್ತು ಬಂಡಿಕೊಡಿಗೇಹಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಅಧಿಸೂಚನೆಯಿಂದ ಭೂಸ್ವಾಧೀನ ಪ್ರಕ್ರಿಯೆಗಾಗಿ ವಶಪಡಿಸಿಕೊಳ್ಳಲು ಹೊರಡಿಸಲಾದ ಜಮೀನುಗಳ ವಿಸ್ತೀರ್ಣವೆಷ್ಟು; (ಪೂರ್ಣ ಮಾಹಿತಿಯೊಂದಿಗೆ ಅಧಿಸೂಚನೆಯ ಪ್ರತಿಗಳನ್ನು ಒದಗಿಸುವುದು)

ಆ) ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು; ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಕಾರಣಗಳೇನು (ಪೂರ್ಣ ಮಾಹಿತಿಯೊಂದಿಗೆ ಅಧಿಸೂಚನೆಯ ಪ್ರತಿಗಳನ್ನು ಒದಗಿಸುವುದು)